ದಿನಾಂಕಃ 22.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ರಿಂದ 3 ಪ್ರತಿವಾದಿ ಪರ ಶ್ರೀ ಜಿ.ಆರ್.ಕೆ ವಕೀಲರಿಂದಃ**

ಪ್ರಸ್ತುತ ಇವತ್ತಿಗೂ ನಮ್ಮ ತಂದೆ ಬದುಕಿದ್ದಾರೆ. ದಾವೆಯನ್ನು ತಯಾರಿಸುವ ಕಾಲಕ್ಕೆ ಮಾಹಿತಿಯನ್ನು ಯಾರು ನೀಡಿದ್ದರು ಎಂದರೆ ನಾನೇ ನೀಡಿದ್ದೆ. ಆ ಕಾಲಕ್ಕೆ ನಿಮ್ಮ ತಂದೆಯವರನ್ನು ಪಕ್ಷಗಾರರನ್ನಾಗಿ ಯಾವ ಕಾರಣಕ್ಕೆ ಸೇರಿಸಲಿಲ್ಲ, ಸೇರಿಸಲು ತೊಂದರೆ ಇತ್ತೆ ಎಂದರೆ ನಮ್ಮ ತಂದೆಯವರಿಗೆ ಗೊತ್ತಿಲ್ಲದ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನಾಗಿ ಸೇರಿಸಿರಲಿಲ್ಲ ಸೇರಿಸಲು ತೊಂದರೆ ಇರಲಿಲ್ಲ. 15.02.1982 ನನ್ನ ಹುಟ್ಟಿದ ದಿನಾಂಕ ನಾನು 10 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಂತರದಲ್ಲಿ ಪ್ರಿಂಟಿಂಗ್ ಪ್ರೆಸ್ ಕೆಲಸ ಮಾಡುತ್ತಿದ್ದೇನೆ. ನೀವು ಪ್ರಿಟಿಂಗ್ ಪ್ರೆಸ್ ಕೆಲಸ ಮಾಡಿಕೊಂಡು ನಿಮ್ಮ ಪಾಡಿಗೆ ಎಲ್ಲೊ ಒಂದು ಕಡೆ ವಾಸವಾಗಿದ್ದಿರಿ ಎಂದರೆ ಇಲ್ಲ ನಾವು ಒಟ್ಟಿಗೆ ವಾಸವಾಗಿದ್ದೆವು.

ನೀವು ನಿಮ್ಮ ಸಹೋದರರು ಎಷ್ಟು ವರ್ಷಗಳಿಂದ ಪ್ರತ್ಯೇಕವಾಗಿ ವಾಸವಾಗಿದ್ದೀರಿ ಎಂದರೆ 2008 ಮದುವೆಯಾದ ನಂತರ ಪ್ರತ್ಯೇಕವಾಗಿ

ವಾಸವಾಗಿದ್ದೆವೆ. ಮದುವೆಯಾದ ನಂತರ ನೀವು ಮತ್ತು ನಿಮ್ಮ ಸಹೋದರ ವ್ಯವಹಾರಿಕವಾಗಿ ಪ್ರತ್ಯೇಕವಾಗಿ ಅವರ ಅವರ ದುಡಿಮೆಯ ಮೇಲೆ ಜೀವಿಸುತ್ತಿದ್ದೀರಿ ಎಂದರೆ ಸರಿಯಲ್ಲ ಒಟ್ಟಾಗೆ ಮಾಡುತ್ತಿದ್ದೆವೆ. ದಾವಾ ಸ್ವತ್ತು ನಿಮ್ಮ ಒಟ್ಟು ಕುಟುಂಬದ ಆಸ್ತಿಯೆ ಅಲ್ಲ ಮತ್ತು ದಾವಾ ಸ್ವತ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲ ಆದ ಕಾರಣ ಉದ್ದೇಶ ಪೂರ್ವಕವಾಗಿ ನಿಮ್ಮ ತಂದೆಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ನಿಮ್ಮ ತಂದೆಯವರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕಿಲ್ಲದ ಕಾರಣ ನಿಮಗೂ ಯಾವುದೇ ಹಕ್ಕು, ಭಾಗ ಬರುವುದಿಲ್ಲ ಎಂಬ ಕಾರಣಕ್ಕೆ ನಿಮ್ಮ ತಂದೆಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು 2 ನೇ ಪ್ರತಿವಾದಿ ಅವರ ಸ್ವ ಆದಾಯದಿಂದ ಕೊಂಡುಕೊಂಡಿರುವಂತಹ ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಸ್ವತ್ತು 2 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದ್ದು ಈ ಸುಳ್ಳು ದಾವೆಯನ್ನು ವಿಭಾಗಕ್ಕಾಗಿ ಸಲ್ಲಿಸಿದ್ದೀರ ಎಂದರೆ ಸರಿಯಲ್ಲ. ಪ್ರತಿವಾದಿ 4 ರಿಂದ 6 ದಾವಾ ಸ್ವತ್ತನ್ನು ಕೊಂಡಕೊಂಡಾಗಿನಿಂದ ಅವರೇ ಸ್ವಾದೀನದಲ್ಲಿದ್ದಾರೆ ನೀವಾಗಲಿ ನಿಮ್ಮ

ಕುಟುಂಬದವರಾಟಲಿ ಸ್ವಾದೀನದಲ್ಲಾಗಲಿ ಇಲ್ಲ, ಹಕ್ಕುಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.